# ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

## ದಿನಾಂಕ 12–12–2011 ರಂದು ಬೆಳಿಗ್ಗೆ 11.30 ಗಂಟೆಗೆ ಪ್ರಾಧಿಕಾರದ ಮಾನ್ಯ ಅಧ್ಯಕ್ಷರ ಸೂಚನೆಯಂತೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯ ನಡುವಳಿಗಳು

* * * * *

**ವಿಷಯ ಸಂಖ್ಯೆ 01** ಪಂಚನಾಥರಾಯಪಾಳ್ಯದ ನೀರು ಶುದ್ಧೀಕರಣ ಘಟಕದಿಂದ ಅಮಾನಿಕೆರೆಗೆ ನಿರಂತರವಾಗಿ ನೀರು ತುಂಬಿಸುವ ಸಂಬಂಧ

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಲ್ಲಿ ಸಮಗ್ರವಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಅಭಿವೃದ್ಧಿಗೊಳಿಸಿದ ನಂತರ ಕೆರೆಗೆ ನಿರಂತರವಾಗಿ ನೀರನ್ನು ತುಂಬಿಸಬೇಕಿರುತ್ತದೆ. ಆದುದರಿಂದ ತುಮಕೂರು ನಗರದ ಕುಡಿಯುವ ನೀರಿನ ಯೋಜನೆಯ ಎರಡನೇ ಹಂತವು ಪಂಚನಾಥರಾಯಪಾಳ್ಯದಲ್ಲಿ ದಿನಾಂಕ 09–12–2011 ರಂದು ಕಾರ್ಯರಂಭವಾಗುತ್ತಿದ್ದು, ಈ ಶುದ್ಧೀಕರಣ ಘಟಕದಲ್ಲಿ ಪ್ರತಿದಿನ ಲಭ್ಯವಾಗುವ ಬ್ಯಾಕ್‌ವಾಶ್ ವಾಟರ್‌ನ್ನು ಕೆರೆಗೆ ತುಂಬಿಸಬಹುದಾಗಿದ್ದು, ಈ ಸಂಬಂಧ ತಗಲುವ ವೆಚ್ಚವನ್ನು ನಗರಾಭಿವೃದ್ಧಿ ಪ್ರಾಧಿಕಾರದಿಂದ ಭರಿಸಬಹುದಾಗಿರುತ್ತದೆ. ಈ ಯೋಜನೆಗೆ ಸರ್ಕಾರದ ಅನುಮೋದನೆಯು ಅಗತ್ಯವಿರುತ್ತದೆ. ಪಂಚನಾಥರಾಯಪಾಳ್ಯದ ಶುದ್ಧೀಕರಣ ಘಟಕದಿಂದ ನೀರನ್ನು ಪಡೆದಲ್ಲಿ ಅಮಾನಿಕೆರೆಗೆ ನಿರಂತರವಾಗಿ ನೀರನ್ನು ತುಂಬಿಸಬಹುದಾಗಿದೆ. ಅಮಾನಿಕೆರೆಯ ಅಭಿವೃದ್ಧಿಯ ನಂತರ ಈ ನಿರ್ವಹಣೆಯನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ನಿರ್ವಹಿಸಬೇಕಿದ್ದು, ನಿರಂತರವಾಗಿ ಸಂಪನ್ಮೂಲ ಕ್ರೂಢೀಕರಣದೊಂದಿಗೆ ನಗರಕ್ಕೆ ಸುಂದರ ಪ್ರವಾಸಿ ತಾಣವನ್ನು ನಿರ್ಮಿಸಿದಂತಾಗುತ್ತದೆ. ನೀರನ್ನು ತುಂಬಿಸುವುದರಿಂದ ನಗರ ಮತ್ತು ಸುತ್ತ ಮುತ್ತಲ ಪ್ರದೇಶದಲ್ಲಿ ಅಂತರ್‌ಜಲ ಅಭಿವೃದ್ಧಿಗೊಂಡು ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾದಂತಾಗುತ್ತದೆ. ಆದುದರಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಿದ್ದು, ಅದರಂತೆ ಕ್ರಮಕೈಗೊಳ್ಳಲು ಅನುವಾಗುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನು ಕೋರಬಹುದಾಗಿದ್ದು, ವಿಷಯವನ್ನು ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯನ್ನು ಸಮಗ್ರವಾಗಿ ಸುಮಾರು ರೂ.13.00 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಅಭಿವೃದ್ಧಿಯ ನಂತರ ಕೆರೆಗೆ ನೀರನ್ನು ತುಂಬಿಸುವುದು ಅಗತ್ಯವಾಗಿದ್ದು, ಅದು ಯೋಜನೆಯ ಮೂಲ ಆಶಯವಾಗಿದೆ. ಸದರಿ ಉದ್ದೇಶಕ್ಕೆ ಪೂರಕವಾಗಿ, ಪಂಚನಾಥರಾಯಪಾಳ್ಯದ ನೀರು ಶುದ್ಧೀಕರಣ ಘಟಕದಲ್ಲಿ

ಬ್ಯಾಕ್‌ವಾಶ್ ವಾಟರ್ ಸುಮಾರು 20 ಲಕ್ಷ ಲೀಟರ್ ಪ್ರತಿದಿನ ದೊರಯಬಹುದೆಂದು ಸಭೆಯಲ್ಲಿ ಹಾಜರಿದ್ದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಅಭಿಯಂತರರು ತಿಳಿಸಿರುತ್ತಾರೆ. ಸದರಿ ಬ್ಯಾಕ್‌ವಾಶ್ ವಾಟರನ್ನು ತುಮಕೂರು ಅಮಾನಿಕೆರೆಗೆ ಪ್ರತಿದಿನ ತುಂಬಿಸಲು ಪೈಪ್‌ಲೈನ್‌ನ್ನು ಅಳವಡಿಸಬೇಕಿದ್ದು, ಅಂದಾಜು ವೆಚ್ಚ ರೂ.250 ಲಕ್ಷಗಳಾಗುತ್ತದೆಯೆಂದು ತಿಳಿಸಿರುತ್ತಾರೆ. ಸಭೆಯ ಅಧ್ಯಕ್ಷತೆ ವಹಿಸಿದ್ದ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಈ ಯೋಜನೆಯಿಂದ ಅಂತರ್‌ಜಲ ಮಟ್ಟ ಉತ್ತಮಗೊಂಡು ನಗರಸಭೆಯ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗುವುದರಿಂದ ನಗರಸಭೆಯ ಧನಸಹಾಯ ನೀಡಬಹುದೆಂದು ಸೂಚಿಸಿದರು. ಸಭೆಯಲ್ಲಿ ಹಾಜರಿದ್ದ ನಗರ ಸಭೆಯ ಪೌರಾಯುಕ್ತರು ವಿಷಯವನ್ನು ನಗರಸಭೆಯ ಕೌನ್ಸಿಲ್ ಸಭೆಯಲ್ಲಿಟ್ಟು ತೀರ್ಮಾನ ತೆಗೆದುಕೊಳ್ಳುವುದಾಗಿ ಸಭೆಗೆ ತಿಳಿಸಿದರು. ಇದೇ ರೀತಿ ಸರ್ಕಾರದಿಂದ ಅನುದಾನ ಲಭ್ಯವಿದ್ದಲ್ಲಿ ಪಡೆಯಲು ಕ್ರಮವಿಡಬಹುದೆಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು. ಈ ಕಾಮಗಾರಿಯ ನಿಖರ ಅಂದಾಜು ವೆಚ್ಚದೊಂದಿಗೆ ಯೋಜನಾ ವರದಿಯನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲಾಯಿತು. ಅಂತಿಮವಾಗಿ ಈ ಕಾಮಗಾರಿಯನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ಕೈಗೊಳ್ಳಲು ಶೀಘ್ರಕ್ರಮವಿಡುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಸಹಿ/–
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

ಸಹಿ– ನಕಲು –

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.